**ಸಾಕ್ಷಿಯನ್ನು ದಿನಾಂಕಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ವಾದಿ ಪರ ಶ್ರೀ ಸಿ.ಎಲ್.ಬಿ, ವಕೀಲರಿಂದಃ**

ವಾದಿಗಳು ಮತ್ತು ಅವರ ತಂದೆ ದಿನಾಂಕ 18.12.2003 ರಂದು ರೂ.50,000/- ಹಣ ಸಾಲವನ್ನು ಪಡೆದು ದಾವಾ ಸ್ವತ್ತನ್ನು 6 ವರ್ಷಗಳ ಅವಧಿಗಾಗಿ ನನಗೆ ಭೋಗ್ಯ ಮಾಡಿದ್ದರು ಎಂದರೆ ಸರಿ. ಈ ರೀತಿ ಭೋಗ್ಯ ಮಾಡಿದ ನಂತರ ದಾವಾ ಸ್ವತ್ತಿನ ಸ್ವಾಧೀನವನ್ನು ನನಗೆ ವಹಿಸಿಕೊಟ್ಟಿದ್ದರು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಕರಿಕಲ್ಲು ನಿಕ್ಷೇಪ ಇದೆ ಎಂದು ತಿಳಿದ ನಂತರ ದಿನಾಂಕ 30.04.2004 ರಂದು ಭೋಗ್ಯದ ರೀತಿಯಲ್ಲಿ ಕರಿಕಲ್ಲು ತೆಗೆಯಲು 1,30,000/- ರೂ.ಗಳಿಗೆ ಕರಾರಾಗಿರುತ್ತದೆ ಎಂದರೆ ಸರಿ. ಸದರಿ ರೂ.1,30,000/- ಹಣದ ಪೈಕಿ ಭೋಗ್ಯದ ಹಣವನ್ನು ಉಳಿಸಿಕೊಂಡು ರೂ. 80,000/- ಹಣವನ್ನು ವಾದಿಗಳು ಮತ್ತು ಅವರ ತಂದೆಗೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಭೋಗ್ಯದ ಅವಧಿಯಲ್ಲಿ ವಾದಿಗಳ ಹೆಸರಿನಲ್ಲಿ ಕರಿಕಲ್ಲು ತೆಗೆಯಲು ಪರವಾನಗಿ ಪಡೆಯತಕ್ಕದ್ದು ಎಂದು ಮಾತುಕತೆಯಾಗಿತ್ತು ಎಂದರೆ ಸರಿ. ಈ ರೀತಿ ಕರಾರು ಆದ ನಂತರ ದಾವಾ ಸ್ವತ್ತಿನಲ್ಲಿ ಕರಿಕಲ್ಲು ತೆಗೆಯುತ್ತಿದ್ದೆನು ಎಂದರೆ ಸರಿ. 6 ವರ್ಷಗಳ ಅವಧಿ ಮುಗಿದ ನಂತರ ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗಳಿಗೆ ವಹಿಸಿಕೊಡತಕ್ಕದ್ದು ಎಂದು ತೀರ್ಮಾನವಾಗಿತ್ತು ಎಂದರೆ ಸರಿ, ಆದರೆ ವಾದಿಗಳು ಪುನಃ ಭೋಗ್ಯಕ್ಕೆ ಕೊಡುವುದಾಗಿ ಹೇಳಿದ್ದರು. ವಾದಿಗಳು ಯಾವತ್ತೂ ಕೂಡ ಪುನಃ ಭೋಗ್ಯಕ್ಕೆ ಕೊಡುವುದಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ವಾದಿಗಳ ತಂದೆ ದಿನಾಂಕ 02.08.2014 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ವಾದಿಗಳ ತಂದೆ ಮೃತಪಟ್ಟ ನಂತರ ವಾದಿಗಳು ಹಲವಾರು ಬಾರಿ ನನ್ನ ಬಳಿ ಬಂದು ಭೋಗ್ಯ ತೀರುವಳಿ ಮಾಡಿ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಡಿಸಿಕೊಳ್ಳುವಂತೆ ಹೇಳಿದ್ದರೂ ಕೂಡ ನಾನು ಕಾರಣಗಳನ್ನು ಹೇಳುತ್ತಾ ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ಭೋಗ್ಯ ತೀರುವಳಿ ಮಾಡಿಕೊಡದೆ ವಾದಿಗಳು ನನಗೆ ತೊಂದರೆ ಕೊಡುತ್ತಿದ್ದಾರೆಂದು ಹೇಳಿ

ಮೂಲದಾವೆ ಸಂಖ್ಯೆ 232/2016 ರಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿರುವಾಗ ವಾದಿಗಳು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿದ್ದ ದಾವೆಯಲ್ಲಿ ಉಭಯಪಕ್ಷಗಾರರ ಸಾಕ್ಷ್ಯ ವಿಚಾರಣೆಯಾಗಿರುತ್ತದೆ ಎಂದರೆ ಸರಿ. ಗಣಿಗಾರಿಕೆಗಾಗಿ ಸುಮಾರು 15 ಲಕ್ಷಕ್ಕೂ ಹೆಚ್ಚು ಹಣವನ್ನು ವಿನಿಯೋಗಿಸಿರುತ್ತೇನೆ ಎಂದು ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ವಾದಿಗಳು ಯಾವತ್ತೂ ಕೂಡ ಅಕ್ರಮವಾಗಿ ಕಲ್ಲನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವಾದಿಗಳಿಗೆ ಬಿಟ್ಟುಕೊಡಬೇಕಾಗುತ್ತದೆಂಬ ಉದ್ದೇಶದಿಂದ ಮತ್ತು ಭೋಗ್ಯ ತೀರುವಳಿ ಮಾಡಿಕೊಡಬೇಕಾಗುತ್ತದೆಂಬ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳುಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಈಗಾಗಲೇ ನನಗೆ ಭೋಗ್ಯದ ಹಣವನ್ನು ಪಾವತಿಸಿರುವುದರಿಂದ ಅವರಿಗೆ ದಾವಾ ಸ್ವತ್ತನ್ನು ಬಿಟ್ಟುಕೊಡದೆ ಹೇಗಾದರೂ ಮಾಡಿ ಅವರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಭೋಗ್ಯ ತೀರುವಳಿ ಮಾಡಿಕೊಡದೆ ಕಾಲಾಹರಣ ಮಾಡಿರುವುದರಿಂದ ವಾದಿಗಳಿಗೆ ಸಾಕಷ್ಟು ನಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾಸ್ತವಾಂಶಕ್ಕೆ ವಿರುದ್ಧವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**